# ಪ್ರಧಾನ ಸಿವಿಲ್ ನ್ಯಾಯಾದೀಶರು, ಜೆ.ಎಮ್.ಎಫ್. ಸಿ–2 ರಾಯಚೂರು

**ಸಿ.ಸಿ.ನಂ.4318/2022**

**ಪಿ.ಡಬ್ಲ್ಯೂ: 5**
**ಸಿ.ಡಬ್ಲ್ಯೂ: 2**

ಸಾಕ್ಷಿದಾರರ ಹೆಸರು : ಬಾಲರಾಜ್ ಗೌಡ

ತಂದೆಯ ಹೆಸರು : ಬಸವರಾಜಪ್ಪ ಗೌಡ

ವಯಸ್ಸು : 50 ವರ್ಷ

ಉದ್ಯೋಗ : ಕೂಲಿ

ವಾಸಸ್ಥಳ : ರಾಯಚೂರು.

ಇಂದು ದಿ:05–04–2023 ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ನನಗೆ ಆರೋಪಿತನ ಪರಿಚಯವಿಲ್ಲ. ಪ್ರಕರಣದ ಬಗ್ಗೆ ಮಾಹಿತಿ ಇರುವದಿಲ್ಲ. ಚಾ.ಸ.3 ಗೊತ್ತು. ಸಾಕ್ಷಿಯು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ನಿ:ಪಿ–1 ಕ್ಕೆ ನಾನು ಪೋ.ಠಾ. ಯಲ್ಲಿ ಸಹಿ ಮಾಡಿರುತ್ತೇನೆ. ನನಗೆ ನಿ:ಪಿ–1ರ ಒಳಾಂಶಗಳ ಬಗ್ಗೆ ಮಾಹಿತಿ ಇಲ್ಲ. ಪೊಲಿಸರು ನನ್ನ ಸಮಕ್ಷಮ ಯಾವುದೇ ಸ್ಥಳ ಮತ್ತು ಜಪ್ತಿ ಪಂಚನಾಮೆ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಪ್ರಾರ್ಥಿಸುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಸ.ಸ.ಅ. ರವರಿಂದ:**

ದಿ: 17–02–2021 ರಂದು ಸಂಜೆ 05–45 ರಿಂದ 06–50 ಗಂಟೆಯವರೆಗೆ ಪೊಲೀಸರು ನನ್ನ ಮತ್ತು ಚಾಸಾ–3 ರವರ ಸಮಕ್ಷಮ ನಿ.ಪಿ.1 ರಂತೆ ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾಲಕ್ಕೆ 180 ಎಮ್ ಎಲ್. ಓರಿಜಿನ್ ಚಾಯ್ಸ್ 24 ಟೆಟ್ರಾ ಪ್ಯಾಕ್ 650 ಎಮ್ ಎಲ್. ಕಿಂಗ್ ಫಿಷಿಯರ್ ಸ್ಟ್ರಾಂಗ್ ಬಿಯರ್ 12 ಬಾಟಲುಗಳು, 330 ಎಮ್ ಎಲ್. ಕಿಂಗ್ ಫಿಷಿಯರ್ 6 ಟಿನ್ ಇವುಗಳನ್ನು ನನ್ನ ಮತ್ತು ಚಾ.ಸ.2 ರವರ ಸಮಕ್ಷಮ ಆರೋಫಿತರ ಕಡೆಯಿಂದ ಜಪ್ತಿ ಪಡೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಚಾ.ಸ.3 ರವರು ನಿ.ಪಿ.1 ನ್ನು ಬರೆದ ನಂತರ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅವುಗಳಿಂದ 180 ಎಮ್ ಎಲ್. ಓರಿಜಿನ್ ಚಾಯ್ಸ್ 14 ಟೆಟ್ರಾ ಪ್ಯಾಕ್ 650 ಎಮ್ ಎಲ್. ಕಿಂಗ್

ಫಿಷಿಯರ್ ಸ್ಟ್ರಾಂಗ್ ಬಿಯರ್ 03 ಬಾಟಲುಗಳು, 330 ಎಮ್ ಎಲ್. ಕಿಂಗ್ ಫಿಷಿಯರ್ 03 ಟಿನ್ ರಾಸಾಯಾನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ. 1ರಲ್ಲಿರುವ ವಿಷಯಗಳು ಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/-

ಜೆ.ಎಂ. ಎಫ್. ಸಿ.-2, ರಾಯಚೂರು